
ತಮ್ಮ ಸಮುದಾಯದವರ ಗ್ರಾಮೀಣ ನುಡಿಗಟ್ಟುಗಳು, ಜನಪದ ಗಾದೆ ಮಾತುಗಳು, ಬೈಗುಳಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿರುವುದು ಕಥೆಗಳ ಬೆಡಗನ್ನು ಹೆಚ್ಚಿಸಿದೆ. ಪ್ರಬಂಧ ಹಾಗೂ ಕಥನ ಶೈಲಿಗಳೆರಡೂ ಜಾಗ ಪಡೆದಿವೆ. ಪ್ರತಿರೋಧ ಮತ್ತು ನ್ಯಾಯದ ಆಗ್ರಹದ ಎರಡು ಆಯಾಮಗಳನ್ನು ಈ ಕಥೆಗಳು ಹೊಂದಿವೆ. ರವಿಕುಮಾರ್ ನೀಹ ಅವರ ಒಟ್ಟು ಸಾಹಿತ್ಯವನ್ನು ಗಮನಿಸಿದಾಗ, ಸಮುದಾಯದ ಧ್ವನಿಯು ದಟ್ಟವಾಗಿ ಎಲ್ಲ ಪ್ರಕಾರಗಳಲ್ಲೂ ಆವರಿಸಿಕೊಂಡಿರುವುದು ಗಮನಾರ್ಹ. ವಿಮರ್ಶೆ ಮತ್ತು ಸಂಶೋಧನೆಗಳಲ್ಲಿ ಪಡೆದ ಜ್ಞಾನವನ್ನು ಅವರು ತಮ್ಮ ಕಥೆಗಳಲ್ಲಿ ಸಶಕ್ತವಾಗಿ ಬಳಸಿಕೊಂಡಿದ್ದಾರೆ.

ಸಾಮಾಜಿಕ ಪ್ರಜ್ಞೆ ಮತ್ತು ಸೈದ್ಧಾಂತಿಕ ಹಿನ್ನೆಲೆಯಲ್ಲಿ ನಿರ್ಲಕ್ಷಿತ ಸಮುದಾಯಗಳ ಅಂತರಾಳದ ವೇದನೆಯನ್ನು ನೀಹ ಅವರ ಕಥೆಗಳು ಪ್ರಥಮವಾಗಿ ಬಿಚ್ಚಿಡುತ್ತವೆ. ಜಾತಿ ಪದ್ಧತಿ, ಲಿಂಗ ತಾರತಮ್ಯಗಳ ಮೂಸೆಯಲ್ಲಿ ಇವರು ಕಥೆಗಳನ್ನು ಕಟ್ಟುತ್ತಾ ಸಾಗಿದ್ದಾರೆ. ಇವೆಲ್ಲ ಲೇಖಕರ ಬೌದ್ಧಿಕ ನೆಲೆಯಲ್ಲಿ ಚರ್ಚಿತಗೊಂಡರೂ ಪ್ರಜ್ಞೆಯ ಜೊತೆಗೆ ಭಾವ ಪ್ರಾಧಾನ್ಯಕ್ಕೂ ಆದ್ಯತೆ ನೀಡಿವೆ. ದಲಿತ ಸಂವೇದನೆಗಳಲ್ಲಿ ಅದ್ದಿ ತೆಗೆದ ಜೀವ ಕಾರುಣ್ಯದ ಕಥೆಗಳು ಸಾವಿರಾರು ವರ್ಷಗಳಿಂದ ಶೋಷಿಸಲ್ಪಡುತ್ತಾ ಸಾಮಾಜಿಕ ಬದುಕಿನಿಂದ ಹೊರಗುಳಿದ ಪ್ರತಿ ದಿನವೂ, ಪ್ರತಿ ಕ್ಷಣವೂ ಸಾಮಾಜಿಕವಾಗಿ ಹೋರಾಡುತ್ತಲೇ ಬದುಕುವ ಕೇರಿ ಜನರ ದಾರುಣ ನೋವು, ಚರಿತ್ರೆ ಮತ್ತು ವರ್ತಮಾನದಲ್ಲೂ ಪ್ರವಹಿಸುತ್ತಿರುವುದು ಇಲ್ಲಿನ ಕಥೆಗಳಲ್ಲಿ ಜೀವಂತವಾಗಿರುವುದು ವಿಪರ್ಯಾಸ. ಭವಿಷ್ಯದ ತಲ್ಲಣಗಳ ಹಿನ್ನೆಲೆಯಲ್ಲಿ ನ್ಯಾಯಿಕ ಹೋರಾಟ ಮಾಡುತ್ತವೆ.

ಅಸ್ಪೃಶ್ಯತಾ ಆಚರಣೆಗೆ ತೀವ್ರವಾಗಿ ವ್ಯಗ್ರವಾಗುವ ಕಥೆಗಾರರು, ಎಲ್ಲವನ್ನೂ ಜಾತಿ ಆಧಾರಿತವಾಗಿ ನೋಡುವ ಅಂಧಾನುಕರಣೆಯಿಂದ ಹೊರಬಂದು ವೈಚಾರಿಕವಾಗಿ ಚಿಂತಿಸಲು ಕರೆ ಕೊಡುತ್ತಾರೆ. ಇಲ್ಲಿನ ಕಥೆಗಳು ಸಾಹಿತ್ಯಿಕ ಒತ್ತಾಸೆಗೆ ಮಾತ್ರ ಸೀಮಿತವಾಗದೇ, ಸಾಮಾಜಿಕ ಚಳವಳಿಯ ರೂಪದಲ್ಲೂ ಒಡಮೂಡಿವೆ. ವಿಷಾದ, ನೀಹ ಅವರ ಕಥೆಗಳ ಜೀವಸ್ಥಾಯಿಯಾಗಿದೆ. ತಳ ಸಮುದಾಯಗಳ ಆಶೋತ್ತರಗಳಿಗೆ ಬೆನ್ನೆಲುಬಾಗಿ




**ಕೃತಿ: ಅವು ಅಂಗೇ...!**
ಲೇ: ರವಿಕುಮಾರ್ ನೀಹ
ಪು: 144 ಬೆ: 195 ರೂ.
ಪ್ರಕಾಶನ: ಜಲಜಂಬು ಲಿಂಕ್ಸ್, ತುಮಕೂರು
ಫೋನ್: 9742667687